sdmimd

## Vijaya Karnataka

**Date:** December 6th, 2014 **Page No.** 03

**Edition:** Mysuru **Language: Kannada**

# ನೂತನ ಸಂವಹನ ವಿಧಾನ ಬಳಕೆ ಅಗತ್ಯ

**ವಿಕ ಸುದ್ದಿಲೋಕ** ಮೈಸೂರು

ಸಾಂಪ್ರದಾಯಿಕ ಸಾಂಸ್ಥಿಕ ವ್ಯವಸ್ಥೆಯಿಂದ ಹೊರ ಬಂದು ಈಗಿನ ಪೀಳಿಗೆಗೆ ಅನುಗುಣವಾಗಿ ಸಂಸ್ಥೆಯನ್ನು ಮುನ್ನೆಡೆಸುವುದರಿಂದ ಹೆಚ್ಚು ಉತ್ಪಾದನೆ ಪಡೆಯಲು ಸಾಧ್ಯವಿದೆ ಎಂದು ಅಡ್ರಿನಲಿನ್ ಇ-ಸಿಸ್ಟಮ್ಸ್ ಲಿಮಿಟೆಡ್‌ನ ಸಿಇಒ ಸ್ವಾಮಿನಾಥನ್ ಸಂತಾನಂ ಅಭಿಪ್ರಾಯಪಟ್ಟರು.

ಮೈಸೂರಿನ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆ ಶುಕ್ರವಾರ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ಷೇತ್ರದಲ್ಲಿ 'ಮಾನವ ಸಂಪನ್ಮೂಲ ನಿರ್ವಹಣೆ' ಕುರಿತ 2 ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಾಸ್ತವಿಕವಾಗಿ ಮಾತನಾಡಿದರು.

2015ರ ವೇಳೆಗೆ ಸಾಮಾನ್ಯವಾಗಿ 1980ರ ನಂತರ ಜನಿಸಿದ ಹೊಸ ಪೀಳಿಗೆಯ ಯುವ ಜನತೆ ಕಾರ್ಯಕ್ಷೇತ್ರದಲ್ಲಿರುತ್ತದೆ. ಈ ಸಮೂಹವನ್ನು ಸಾಂಪ್ರದಾಯಿಕ ಮಾನದಂಡಗಳ ಬಳಕೆಯಿಂದ ನಿರ್ವಹಣೆ ಮಾಡುವುದರಿಂದ ಸಂಸ್ಥೆಗಳಲ್ಲಿ ಉತ್ತಮ ಫಲಿತಾಂಶ ಕಾಣಲು ಸಾಧ್ಯವಿಲ್ಲ. ಆದ್ದರಿಂದ ಬದಲಾದ ಸನ್ನಿವೇಶದಲ್ಲಿ ಇಂಟರ್‌ನೆಟ್ ಯುಗದ ವಿಶೇಷ ಮನೋಭಾವದ ಮಾನವ ಸಂಪನ್ಮೂಲವನ್ನು ಬೇರೆ ಕಾರ್ಯತಂತ್ರಗಳ ಮೂಲಕ ಬಳಕೆ ಮಾಡಿಕೊಳ್ಳಬೇಕಿದೆ. ಅವರೊಂದಿಗೆ ಉತ್ತಮ ಭಾಂದವ್ಯ ಹೊಂದುವ ಹಾಗೂ ಪ್ರತಿಯೊಬ್ಬ ಸಿಬ್ಬಂದಿಯೂ ನೀಡುವ ಸಲಹೆಯನ್ನು ಪಡೆಯುತ್ತಾ, ಅನವಶ್ಯಕವಾಗಿ ದೂರು ನೀಡುವವರನ್ನು ದೂರವಿಟ್ಟು ಸಿಬ್ಬಂದಿ ಸ್ನೇಹಿ ನಿರ್ವಹಣೆಯಿಂದ ಉತ್ಪಾದನೆ ಹೆಚ್ಚಾಗಲಿದೆ ಎಂದರು.

ಸಂಸ್ಥೆಯ ನಿರ್ವಹಣೆ ದೃಷ್ಟಿಯಿಂದ ವಿನೂತನ ಸಂವಹನ ವಿಧಾನಗಳ ಬಳಕೆ ಅತ್ಯಗತ್ಯ. ಆದರೆ ಸಂಪೂರ್ಣವಾಗಿ ಅದಕ್ಕೆ ಜೋತು ಬೀಳಬಾರದು. ಮುಖ್ಯಸ್ಥರು ಮಾತನಾಡುವಷ್ಟು ಸನಿಹದಲ್ಲಿರುವಾಗ ಅವರಿಗೆ ಇ-ಮೇಲ್ ಮಾಡಿ ಸಂವಹನ ಸಾಧಿಸುವುದು ಅನಗತ್ಯ. ಕೆಲವೊಮ್ಮೆ ನೇರ ಸಂವಹನ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಆದ್ದರಿಂದ ಸನಿಹದಲ್ಲಿರುವವರು ತಮ್ಮ ಮೇಲಿನ ಅಧಿಕಾರಿಯೊಂದಿಗೆ ನೇರ ಸಂಪರ್ಕದ ಮೂಲಕವೇ ಕೆಲಸ ಮಾಡಿಕೊಳ್ಳುವುದು ಒಳಿತು ಎಂದ ಸಲಹೆ ನೀಡಿದರು.

ಬಳಿಕ ಪ್ರಮುಖ ಕಂಪೆನಿಗಳ ಮುಖ್ಯಸ್ಥರಿಂದ ತಾಂತ್ರಿಕ ಗೋಷ್ಠಿಗಳು ನಡೆದವು. ಸಮ್ಮೇಳನದ ಅಧ್ಯಕ್ಷ ಡಾ. ಮೌಸುಮಿ ಸೆಂಗುಪ್ತಾ, ಡಾ. ಎನ್. ಆರ್. ಪುರುಷೋತ್ತಮ್, ಪ್ರೊ.ಎಸ್. ಪ್ರಭಾಕರ್ ಹಾಗೂ ಇತರರು ಇದ್ದರು.



ಮೈಸೂರಿನ ಎಸ್‌ಡಿಎಂಐಎಂಡಿ ಸಂಸ್ಥೆಯಲ್ಲಿ ನಡೆದ 2 ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಅಡ್ರಿನಲಿನ್ ಇ-ಸಿಸ್ಟಮ್ಸ್ ಲಿಮಿಟೆಡ್‌ನ ಸಿಇಒ ಸ್ವಾಮಿನಾಥನ್ ಸಂತಾನಂ ಉದ್ಘಾಟಿಸಿದರು. ಸಮ್ಮೇಳನದ ಅಧ್ಯಕ್ಷ ಡಾ.ಮೌಸುಮಿ ಸೆಂಗುಪ್ತಾ, ಡಾ. ಎನ್. ಆರ್. ಪುರುಷೋತ್ತಮ್, ಪ್ರೊ.ಎಸ್. ಪ್ರಭಾಕರ್ ಹಾಜರಿದ್ದರು.